# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

## ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರೆ ವಿವರಗಳು:

ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 5ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಪದನಾಮಕರಿಸಿದ್ದು, ಅವರಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

| ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರಿ |
|---|---|---|
| ಆಡಳಿತಅಧಿಕಾರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, 12ನೇ ಮಹಡಿ, ವಿ.ವಿ.ಮುಖ್ಯ ಗೋಪುರ, ಬೆಂಗಳೂರು-1 | ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, 12ನೇ ಮಹಡಿ, ವಿ.ವಿ.ಮುಖ್ಯ ಗೋಪುರ, ಬೆಂಗಳೂರು-1 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, 12ನೇ ಮಹಡಿ, ವಿ.ವಿ.ಮುಖ್ಯ ಗೋಪುರ, ಬೆಂಗಳೂರು-1 |

## ನಿಗಮದ ಸ್ಥಾಪನೆ

ಕರ್ನಾಟಕ ರಾಜ್ಯದ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು 2001ರ ಜನಗಣತಿ ಪ್ರಕಾರ 82,93,576 ಇದ್ದು, ಈ ಪ್ರಮಾಣವು ರಾಜ್ಯದ ಒಟ್ಟು ಜನಸಂಖ್ಯೆಯ ಶೇ.15.69 ಆಗಿರುತ್ತದೆ. ರಾಜ್ಯದಲ್ಲಿ ವಾಸಿಸುತ್ತಿರುವ ಮುಸಲ್ಮಾನರು, ಕ್ರಿಶ್ಚಿಯನ್‌ರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುತ್ತಾರೆ. ಅಲ್ಪಸಂಖ್ಯಾತ ಸಮುದಾಯದ ಬಹುಪಾಲು ಜನರು ಬಡತನದ ರೇಖೆಯಲ್ಲಿಯೇ ಸುತ್ತುತ್ತಿದ್ದು, ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯು ಚಿಂತಾಜನಕವಾಗಿದೆ ಮತ್ತು ಅವರ ಸರ್ವಾಂಗೀಣ ಬೆಳವಣಿಗೆಯು ಮರೆಮಾಡಲ್ಪಟ್ಟಿದೆ.

ಅಲ್ಪಸಂಖ್ಯಾತ ಸಮುದಾಯದ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವ ಗುರುತರ ಜವಾಬ್ದಾರಿಯನ್ನು ಮೊದಲು ಸ್ಥಾಪಿಸಿದ್ದ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ (ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಎಂದು ಪುನರ್‌ನಾಮಕರಣಗೊಂಡಿದೆ) ವಹಿಸಲಾಗಿತ್ತು. ಹೀಗಿದ್ದರೂ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿದ್ದ ಯೋಜನೆಗಳು ಮತೀಯ ಅಲ್ಪಸಂಖ್ಯಾತರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುತ್ತಿಲ್ಲ ಎಂಬ ಅಂಶದಿಂದಾಗಿ ಮತ್ತು ರಾಜ್ಯದ ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸುವ ಸಲುವಾಗಿ ಹಾಗೂ ಅವರನ್ನು ಮುಖ್ಯವಾಹಿನಿಗೆ ತರುವ ಏಕೈಕ ಉದ್ದೇಶದಿಂದ ಆಗಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗ್ಡೆಯವರ ನೇತೃತ್ವದ ಸರ್ಕಾರವು ದಿನಾಂಕ 07.02.1986ರಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಎಂಬ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿತು.

## ನಿಗಮದ ಉದ್ದೇಶ:-

ರಾಜ್ಯದ ಮತೀಯ ಅಲ್ಪಸಂಖ್ಯಾತ ಸಮುದಾಯದ ಕಡುಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದು ಹಾಗೂ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಮುಖ್ಯ ಉದ್ದೇಶವಾಗಿದೆ.

## ನಿಗಮದ ರಚನೆ:

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರ ಸ್ವಾಮ್ಯದ ಉದ್ಯಮವಾಗಿದ್ದು, 1956ರ ಕಂಪೆನಿ ಅಧಿನಿಯಮದನ್ವಯ 07.02.1986ರಂದು ಸ್ಥಾಪಿಸಲ್ಪಟ್ಟಿದೆ. ನಿಗಮದ ಇದುವರೆಗಿನ ಷೇರು ಬಂಡವಾಳವು ರೂ.150 ಕೋಟಿ ಇರುತ್ತದೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯತರ ಕಲ್ಯಾಣ ಇಲಾಖೆಯ ಮೇಲ್ವಿಚಾರಣೆಯಲ್ಲಿ ನಿಗಮವು ಕಾರ್ಯನಿರ್ವಹಿಸುತ್ತಿದೆ. ನಿಗಮದ ನೋಂದಾಯಿತ ಕಛೇರಿ ಬೆಂಗಳೂರಿನಲ್ಲಿ ಇದ್ದು, ಇದರ ಜಿಲ್ಲಾ ಕಛೇರಿಗಳು ರಾಜ್ಯದ ಎಲ್ಲಾ ಜಿಲ್ಲಾಕೇಂದ್ರಗಳಲ್ಲಿ ಇರುತ್ತವೆ. ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ನಿಗಮದ ಜಿಲ್ಲಾ ಕಛೇರಿಗಳ ಮೂಲಕ ಅನುಷ್ಠಾನಗೊಳಿಸಿ ಮತೀಯ ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಉದ್ದೇಶವಾಗಿದೆ.

### ಅ) ನಿಗಮದ ಯೋಜನೆಗಳು

1) 'ಸ್ವಾವಲಂಬನ' ಮಾರ್ಜಿನ್ ಹಣ ಸಾಲ ಮತ್ತು ಸಹಾಯಧನ ಯೋಜನೆ.
2) 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ
3) 'ಶ್ರಮಶಕ್ತಿ' ಯೋಜನೆ
4) ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ
5) ಗಂಗಾ ಕಲ್ಯಾಣ ಯೋಜನೆ
6) ಕೃಷಿ ಭೂಮಿ ಖರೀದಿ ಯೋಜನೆ
7) ಗೃಹ ನಿವೇಶನ ಖರೀದಿ ಹಾಗೂ ಮನೆ ನಿರ್ಮಾಣ ಸಾಲದ ಮೇಲಿನ ಬಡ್ಡಿ ಸಹಾಯಧನ ನೀಡುವ ಯೋಜನೆ
8) ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ಯೋಜನೆ
9) ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ (ದೆಹಲಿ) ಯೋಜನೆಗಳು

## ‘ಸ್ವಾವಲಂಬನ’ ಮಾರ್ಜಿನ್ ಹಣ ಸಾಲ ಯೋಜನೆ ಮತ್ತು ಸಹಾಯಧನ ಯೋಜನೆ

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಸಮುದಾಯದ ಜನರಿಗೆ ವ್ಯಾಪಾರ, ಸಣ್ಣ ಪ್ರಮಾಣದ ಗುಡಿ ಕೈಗಾರಿಕೆ, ಸೇವಾ ಕ್ಷೇತ್ರ, ಕೃಷಿ ಆಧಾರಿತ ಚಟುವಟಿಕೆಗಳು ಮುಂತಾದುವುಗಳನ್ನು ಪ್ರಾರಂಭಿಸಲು ಅಥವಾ ಅಭಿವೃದ್ದಿ ಪಡಿಸಿಕೊಳ್ಳುವ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕುಗಳ/ಹಣಕಾಸು ಸಂಸ್ಥೆಗಳ/ಸಹಕಾರ ಸಂಘಗಳ ಸಹಕಾರ ಮತ್ತು ಸಹಯೋಗದೊಂದಿಗೆ ಸಾಲಸೌಲಭ್ಯ ನೀಡಲಾಗುತ್ತಿದೆ. ರೂ. 5.00 ಲಕ್ಷದವರೆಗಿನ ಘಟಕಕ್ಕೆ ವಾರ್ಷಿಕ ಶೇ.6ರ ಬಡ್ಡಿದರದಲ್ಲಿ ಶೇ.20ರಷ್ಟು ಮಾರ್ಜಿನ್ ಹಣ ಸಾಲ ಮತ್ತು ಘಟಕ ವೆಚ್ಚದ ಶೇ.5ರಷ್ಟು ಅಥವಾ ಗರಿಷ್ಠ ರೂ. 25,000/-ದವರೆಗೆ ಸಹಾಯಧನವನ್ನು ನಿಗಮವು ನೀಡುತ್ತಿದ್ದು, ಉಳಿದ ಸಾಲವನ್ನು ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು/ಸಹಕಾರ ಸಂಘಗಳು ಮಂಜೂರು ಮಾಡುತ್ತಿವೆ.

ನಿಗಮದಿಂದ ಮಂಜೂರಾದ ಮಾರ್ಜಿನ್ ಹಣ ಸಾಲವನ್ನು ಫಲಾನುಭವಿಯು 36/60 ಮಾಸಿಕ ಕಂತುಗಳಲ್ಲಿ ಶೇ.6 ಬಡ್ಡಿಯೊಂದಿಗೆ ನಿಗಮಕ್ಕೆ ಮರುಪಾವತಿ ಮಾಡಬೇಕಾಗುತ್ತದೆ.

ಇದೇ ಯೋಜನೆಯನ್ನು 1959ರ ಸಹಕಾರಿ ಸಂಘಗಳ ಅಧಿನಿಯಮದನ್ವಯ ನೋಂದಾಯಿಸಲ್ಪಟ್ಟಿರುವ, ಅಲ್ಪಸಂಖ್ಯಾತರ ಏಳಿಗೆಗಾಗಿ ಶ್ರಮಿಸುತ್ತಿರುವ ಮತ್ತು ಸಂಘದ ಸದಸ್ಯರು ಪಡೆಯಬಯಸುವ ಸಾಲವನ್ನು ಮಂಜೂರು ಮಾಡಲು ತಮ್ಮಲ್ಲಿ ಸಾಕಷ್ಟು ಹಣಕಾಸಿನ ಬೆಂಬಲ ಹೊಂದಿರುವ ಹಾಗೂ ಲಾಭದಲ್ಲಿ ನಡೆಯುತ್ತಿರುವ ಸಹಕಾರ ಸಂಘಗಳ ಮೂಲಕವೂ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸಾಲ ಮಂಜೂರು ಮಾಡಬಯಸುವ ಸಂಘವು ನಿಗಮಕ್ಕೆ ಕೆಳಕಂಡ ದಾಖಲಾತಿಗಳನ್ನು ಒದಗಿಸಬೇಕಾಗುತ್ತದೆ;

(ಅ) ಸಂಘದ ನೋಂದಣಿ ಪ್ರಮಾಣಪತ್ರ,

(ಆ) ಸಂಘದ ‘ನಿಯಮ ಸಂಹಿತೆ’ (ಬೈಲಾ).

(ಇ) ರಾಜ್ಯ ಸರ್ಕಾರದಿಂದ ಪಡೆಯುವ ಹಣಕ್ಕೆ ಮಾಡಿಕೊಂಡ ಪೂರ್ವಸಿದ್ಧತೆ (ಪ್ರಾವಿಜನ್) ವಿವರ

(ಈ) ಕಳೆದ 03 ವರ್ಷಗಳ ಲೆಕ್ಕಪರಿಶೋಧನಾ ವರದಿ

(ಉ) ಸಹಕಾರ ಸಂಘಗಳ ಉಪ-ನಿಬಂಧಕರು ನೀಡಿದ ಹಾಗೂ ಪ್ರತಿಕೂಲ ಅಕ್ಷೇಪಣೆರಹಿತವಾದ ವರದಿ

(ಊ) ಒಪ್ಪಂದ ಪತ್ರ (ಕಾಂಟ್ರಾಕ್ಟ್‌ಡೀಡ್) ಮತ್ತು ಖಾತರಿ ಪತ್ರ (ಗ್ಯಾರಂಟಿ ಲೆಟರ್)

## ‘ಶ್ರಮಶಕ್ತಿ’ ಯೋಜನೆ

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತ ವರ್ಗದ ಕುಲಕಸುಬುದಾರರಿಗೆ ತರಬೇತಿ ನೀಡಿ, ಅವರು ತಮ್ಮ ಕಲಾತ್ಮಕ ಮತ್ತು ತಾಂತ್ರಿಕ ಕೌಶಲ್ಯವನ್ನು ವೃದ್ಧಿಸಿಕೊಂಡು ಅದೇ ಕಸುಬನ್ನು ಮುಂದುವರೆಸಲು ಅಥವಾ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಲು ಅಥವಾ ಅಭಿವೃದ್ಧಿಗೊಳಿಸುವ ಸಲುವಾಗಿ, ನಿಗಮದಿಂದ ಕಡಿಮೆ ಬಡ್ಡಿದರದಲ್ಲಿ ರೂ.25,000/-ದವರೆಗೆ ಸಾಲಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ಇದರಲ್ಲಿ, ಶೇ.75ರಷ್ಟು ಸಾಲವನ್ನು 36 ತಿಂಗಳಿನಲ್ಲಿ ಫಲಾನುಭವಿಯು ಮರುಪಾವತಿ ಮಾಡಿದಲ್ಲಿ, ಯಳಿದ ಶೇ.25ರಷ್ಟು ಹಣವನ್ನು ‘ಬ್ಯಾಕ್‌ಎಂಡ್ ಸಹಾಯಧನ’ವನ್ನಾಗಿ ಪರಿಗಣಿಸಲಾಗುತ್ತದೆ. ಫಲಾನುಭವಿಯು ತಾನು ಪಡೆದ ಸಾಲವನ್ನು 36 ತಿಂಗಳೊಳಗಾಗಿ

ಮರುಪಾವತಿ ಮಾಡಲು ವಿಫಲನಾದಲ್ಲಿ, ಉಳಿದ ಶೇ.25ರಷ್ಟು ಸಹಾಯಧನ ಹಣವನ್ನು ಸಹ ಸಾಲವೆಂದು ಪರಿಗಣಿಸಲಾಗುತ್ತದೆ.

ಈ ಯೋಜನೆಯಡಿಯಲ್ಲಿ ನಿಗಮದಿಂದ ಮಂಜೂರಾದ ಸಾಲವನ್ನು ಫಲಾನುಭವಿಯು 36 ಮಾಸಿಕ ಕಂತುಗಳಲ್ಲಿ ಶೇ.4 ಬಡ್ಡಿಯೊಂದಿಗೆ ನಿಗಮಕ್ಕೆ ಮರುಪಾವತಿ ಮಾಡಬೇಕಾಗುತ್ತದೆ.

ಅರ್ಜಿದಾರರು ಹುಟ್ಟಿನಿಂದಾಗಲಿ ಅಥವಾ ವಾಸದಿಂದಾಗಲಿ ರಾಜ್ಯದ ಖಾಯಂ ನಿವಾಸಿಯಾಗಿದ್ದು, ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ್ದು, ವಾರ್ಷಿಕ ವರಮಾನ ರೂ.22,000/- ದೊಳಗೆ ಇದ್ದಲ್ಲಿ, ಅವರು ಸಾಲಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

## 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ

ಈ ಯೋಜನೆಯಡಿಯಲ್ಲಿ ವೃತ್ತಿಪರ ಶಿಕ್ಷಣ ಅಂದರೆ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವಿ, ಡಿಪ್ಲೋಮಾ, ನರ್ಸಿಂಗ್, ಬಿ.ಎಡ್, ಬಿಬಿಎಂ, ಬಿಸಿಎ, ಡಿ.ಎಡ್, ಐಟಿಐ ಮುಂತಾದ ಕೋರ್ಸ್‌ನ್ನು ಮಾಡಬಯಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅವರು ವ್ಯಾಸಂಗ ಪೂರ್ಣಗೊಳಿಸುವವರಿಗೆ ಪ್ರತಿ ವರ್ಷಕ್ಕೆ ರೂ.5,000/-ದಿಂದ 50,000/-ಗಳವರೆಗೆ ಸಾಲವನ್ನು ಮಂಜೂರು ಮಾಡಲಾಗುತ್ತದೆ. ವ್ಯಾಸಂಗ ಪೂರ್ಣಗೊಳಿಸಿದ ಒಂದು ವರ್ಷದ ನಂತರ ಅಂತಹ ವಿದ್ಯಾರ್ಥಿಯು ಶೇ.2ರ ಬಡ್ಡಿದರದಲ್ಲಿ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ.

## ಸಣ್ಣ (ಮೈಕ್ರೋ) ಸಾಲ ಹಾಗೂ ಸಹಾಯಧನ ಯೋಜನೆ

ಈ ಯೋಜನೆಯನ್ನು ಸ್ವ-ಸಹಾಯ ಗುಂಪಿನ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಅಂತಹ ಸಂಘಟಿತ ಗುಂಪು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ 10 ರಿಂದ 20 ಸದಸ್ಯರನ್ನು ಹೊಂದಿದ್ದು, ಅದರ ಸದಸ್ಯರು ಹಣಕಾಸು ಮಿತವ್ಯಯ ಚಟುವಟಿಕೆಯಲ್ಲಿ (thrift activity) ತೊಡಗಿಸಿಕೊಳ್ಳುವ ಉದ್ದೇಶವನ್ನು ಹೊಂದಿರಬೇಕು. ಅಂತಹ ಸಂಘದ ಸದಸ್ಯರು ತಮ್ಮಲ್ಲಿ ಇಬ್ಬರನ್ನು ಪ್ರತಿನಿಧಿ-01 ಮತ್ತು ಪ್ರತಿನಿಧಿ-02 ಆಗಿ ಆಯ್ಕೆಮಾಡಿ ಕೊಂಡಿರಬೇಕು. ಅಂತಹ ಪ್ರತಿನಿಧಿಗಳು ಸ್ವ-ಸಹಾಯ ಗುಂಪಿನ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಬ್ಯಾಂಕಿನಿಂದ ತಮ್ಮನ್ನು 'ಅಧಿಕೃತ ರುಜುದಾರರು' ಎಂಬ ಮಾನ್ಯತೆ ಪಡೆದಿರಬೇಕು. ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಮಹಿಳೆಯರು ರೂಪಿಸಿಕೊಂಡ ಸ್ವ-ಸಹಾಯ ಗುಂಪಿಗೆ ಪ್ರಾಶಸ್ತ್ಯ ಕೊಡಲಾಗುವುದು. ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಅಲ್ಪಸಂಖ್ಯಾತರು ಪ್ರಾರಂಭಿಸ ಬಯಸುವ ಸಣ್ಣ ವ್ಯಾಪಾರ ಅಂದರೆ, ತಳ್ಳುವ ಗಾಡಿಯಲ್ಲಿ ತರಕಾರಿ/ಹಣ್ಣು ಮಾರಾಟ, ಕಲಾಯಿ ಮಾಡುವಿಕೆ, ಹಾಸಿಗೆ ಮಾಡುವಿಕೆ, ಪಾನ್ ಶಾಪ್, ಕಡ್ಲೆಕಾಯಿ ವ್ಯಾಪಾರ, ಸೈಕಲ್ ರಿಪೇರಿ, ಗ್ಯಾಸ್/ಆರ್ಕ್ ವೆಲ್ಡಿಂಗ್, ವಲ್ಕನೈಸಿಂಗ್, ಮೀನು ಮಾರಾಟ, ಟೀ ಶಾಪ್ ಮುಂತಾದುವುಗಳಿಗೆ ನಿಗಮವು ಪ್ರತಿ ಸದಸ್ಯನಿಗೆ ರೂ.10,000/- ಸಾಲ ಸೌಲಭ್ಯವನ್ನು ನೀಡುತ್ತದೆ. ನಿಗಮದಿಂದ ಸಾಲವನ್ನು ಸ್ವ-ಸಹಾಯ ಗುಂಪಿಗೆ ನೇರವಾಗಿ ಮಂಜೂರು ಮಾಡಲಾಗುವುದು. ನಂತರ ಅಂತಹ ಸ್ವ-ಸಹಾಯ ಗುಂಪು, ತಮ್ಮ ಸದಸ್ಯರಿಗೆ ಸಾಲವನ್ನು ಬಿಡುಗಡೆ ಮಾಡುಬೇಕು. ಸಾಲವನ್ನು ಶೇ.5ರ ಬಡ್ಡಿದರದಲ್ಲಿ 36 ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುತ್ತದೆ. ಈ ಯೋಜನೆಯಲ್ಲಿ ರೂ.5000/- ಸಹಾಯಧನವಾಗಿ ಪ್ರತಿ ಫಲಾನುಭವಿಗೆ ನೀಡಲಾಗುವುದು.

# ಗಂಗಾ ಕಲ್ಯಾಣ ಯೋಜನೆ

## ಏತ ನೀರಾವರಿ ಯೋಜನೆ

ಈ ಯೋಜನೆಯಡಿಯಲ್ಲಿ ನಿರಂತರವಾಗಿ ಹರಿಯುತ್ತಿರುವ ನೀರನ್ನು (ನದಿ) ಪೈಪ್‌ಲೈನ್ ಮೂಲಕ ಮೇಲಕ್ಕೆ ಎತ್ತಿ, ಕೃಷಿ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಈ ಯೋಜನೆಯು ಸಂಪೂರ್ಣ ಸಹಾಯಧನ ಯೋಜನೆಯಾಗಿದೆ.

### ಅರ್ಹತೆ:-

1. ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಫಲಾನುಭವಿಯು ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.
2. ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅವರು ಸಣ್ಣ ಮತ್ತು ಅತೀ ಸಣ್ಣ ರೈತರಾಗಿರಬೇಕು.
4. ವಾರ್ಷಿಕ ಕೌಟುಂಬಿಕ ಆದಾಯ ಗ್ರಾಮೀಣ ಪ್ರದೇಶಗಳಲ್ಲಿ ರೂ.96,000/- ಹಾಗೂ ನಗರ ಪ್ರದೇಶಗಳಲ್ಲಿ ರೂ.1.03 ಲಕ್ಷಗಳು ಮೀರಿರಬಾರದು.
5. ಐದು ಎಕರೆ ಒಳಗೆ ಇರುವ ಹಾಗೂ ಅಕ್ಕ ಪಕ್ಕದಲ್ಲಿ ಇರುವ ಕನಿಷ್ಠ ಏಳು ಅಲ್ಪಸಂಖ್ಯಾತರ ಜಮೀನುಗಳಿಗೆ ಏತ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತದೆ.

## ವೈಯಕ್ತಿಕ ಕೊಳವೆಬಾವಿ ಯೋಜನೆ

ಎಲ್ಲೆಲ್ಲಿ ಹರಿಯುವ ನೀರಿನ ವ್ಯವಸ್ಥೆ ಲಭ್ಯವಿರುವುದಿಲ್ಲವೋ ಅಂತಹ ಸ್ಥಳದಲ್ಲಿ ತಜ್ಞ ಭೂ ವಿಜ್ಞಾನಿ ಮೂಲಕ ಗುರುತಿಸಲ್ಪಟ್ಟ ಜಲಬಿಂದು ವ್ಯಾಪ್ತಿಯೊಳಗೆ ನೆಲದಡಿಯಲ್ಲಿ ಕೊಳವೆಬಾವಿಯನ್ನು ಕೊರೆದು, ನಂತರ ನೀರು ಸಂಗ್ರಹಿಸಲು ಟ್ಯಾಂಕ್‌ನ್ನು ನಿರ್ಮಿಸಿಕೊಟ್ಟು, ಅದಕ್ಕೆ ಅಳವಡಿಸಿದ ಪೈಪ್ ಮೂಲಕ ಕೃಷಿ ಭೂಮಿಗೆ ನೀರನ್ನು ಒದಗಿಸಲಾಗುತ್ತದೆ. ಈ ಯೋಜನೆಯು ಸಂಪೂರ್ಣ ಸಹಾಯಧನ ಯೋಜನೆಯಾಗಿದೆ.

ಈ ಯೋಜನೆಯಡಿಯಲ್ಲಿ 2 ರಿಂದ 5 ಎಕರೆ ಭೂಮಿಯನ್ನು ಹೊಂದಿರುವ ಫಲಾನುಭವಿಗೆ ಒಂದು ಕೊಳವೆಬಾವಿ ಕೊರೆಯಿಸಿ ಅಥವಾ ತೆರೆದ ಬಾವಿಯನ್ನು ನಿರ್ಮಿಸಿ, ಅದಕ್ಕೆ ನಿಗಮದಿಂದ ಪಂಪ್‌ಸೆಟ್‌ನ್ನು ಅಳವಡಿಸಲಾಗುವುದು. ಪಂಪ್‌ಸೆಟ್ ಮತ್ತು ವಿದ್ಯುದ್ದೀಕರಣ ಸೇರಿ ಒಟ್ಟು ವೆಚ್ಚ ರೂ.1.50 ಲಕ್ಷವಾಗಿದೆ.

### ಅರ್ಹತೆ:

1. ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಫಲಾನುಭವಿಯು ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.
2. ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅವರು ಸಣ್ಣ ಮತ್ತು ಅತೀ ಸಣ್ಣ ರೈತರಾಗಿರಬೇಕು.
4. ವಾರ್ಷಿಕ ಕೌಟುಂಬಿಕ ಆದಾಯ ಗ್ರಾಮೀಣ ಪ್ರದೇಶಗಳಲ್ಲಿ ರೂ.96,000/- ಹಾಗೂ ನಗರ ಪ್ರದೇಶಗಳಲ್ಲಿ ರೂ.1.03 ಲಕ್ಷಗಳು ಮೀರಿರಬಾರದು.

ಆಯ್ಕೆ ವಿಧಾನ:

ಆಯಾ ಜಿಲ್ಲಾ ವ್ಯವಸ್ಥಾಪಕರು ಸ್ಥಳೀಯ ದಿನಪತ್ರಿಕೆ ಮೂಲಕ ಅರ್ಜಿಯನ್ನು ಆಹ್ವಾನಿಸಿ, ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ, ಆಯಾ ಮತಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುವ ಮತ್ತು ಅವರ ನೇತೃತ್ವದ ತಾಲ್ಲೂಕು ಸಮಿತಿ ಮುಂದೆ ಪ್ರಸ್ತಾವನೆಯನ್ನು ಮಂಡಿಸುತ್ತಾರೆ. ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡಿ, ಸಂಬಂಧಿಸಿದ ನಡಾವಳಿಯನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸಲಾಗುತ್ತದೆ.

## ಕೃಷಿ ಭೂಮಿ ಖರೀದಿ ಯೋಜನೆ

ಈ ಯೋಜನೆಯಡಿಯಲ್ಲಿ ನಿಗಮವು ಕೃಷಿ ಭೂಮಿಯನ್ನು ಖರೀದಿಸಿ, ಗ್ರಾಮೀಣ ಪ್ರದೇಶದಲ್ಲಿರುವ ಭೂಮಿ ರಹಿತ ಅಲ್ಪಸಂಖ್ಯಾತ ಬಡ ರೈತರಿಗೆ ಒದಗಿಸುತ್ತದೆ. ಪ್ರತಿ ಫಲಾನುಭವಿಗೆ 02 ಎಕರೆ ಖುಷ್ಕಿ ಅಥವಾ 01 ಎಕರೆ ತರಿ ಭೂಮಿಯನ್ನು ವಿತರಿಸಲಾಗುತ್ತದೆ. ಸದರಿ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ಮತ್ತು ಕೃಷಿ ಭೂಮಿ ಬೆಲೆಯು ಹೆಚ್ಚಿದ ಪರಿಣಾಮವಾಗಿ, ಅಂತಹ ಭೂಮಿಯ ಮಾರ್ಗದರ್ಶಿ ಬೆಲೆಯನ್ನು ಎರಡು ಪಟ್ಟು ಹೆಚ್ಚಿಸಿ ಮತ್ತು ರೂ.2.50 ಲಕ್ಷಕ್ಕೆ ಮಿತಿಗೊಳಿಸಿ (ನೋಂದಣಿ ಶುಲ್ಕ ಸೇರಿ) ಸರ್ಕಾರವು ಇತ್ತೀಚೆಗೆ ಪರಿಷ್ಕೃತ ಆದೇಶವನ್ನು ಹೊರಡಿಸಿರುತ್ತದೆ.

ಫಲಾನುಭವಿಗೆ ನೀಡುವ ಭೂಮಿ ಬೆಲೆಯಲ್ಲಿ ಶೇ.50ರಷ್ಟನ್ನು ಸಾಲ ಮತ್ತು ಉಳಿದ ಶೇ.50ರಷ್ಟನ್ನು ಸಹಾಯಧನವನ್ನಾಗಿ ಪರಿಗಣಿಸಲಾಗುತ್ತದೆ. ಫಲಾನುಭವಿಯು ತಾನು ಪಡೆದ ಸಾಲವನ್ನು ಸಾಲಿಯಾನ ಶೇ.6ರ ಬಡ್ಡಿದರದಲ್ಲಿ 10 ವರ್ಷ ಅವಧಿಯಲ್ಲಿ ಅರ್ಧ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುತ್ತದೆ. ರಾಜ್ಯದ ಆಯವ್ಯಯದಲ್ಲಿ ಮಾಡಿದ ಹಂಚಿಕೆ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಆಧಾರದ ಮೇಲೆ, ನಿಗಮವು ಜಿಲ್ಲಾವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸುತ್ತಿದೆ. ಆಯಾ ಜಿಲ್ಲಾ ವ್ಯವಸ್ಥಾಪಕರು ಸ್ಥಳೀಯ ದಿನಪತ್ರಿಕೆಯಲ್ಲಿ ಅರ್ಜಿಯನ್ನು ಆಹ್ವಾನಿಸುತ್ತಾರೆ. ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ, ಅಯಾ ಜಿಲ್ಲೆಯ ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುವ ಜಿಲ್ಲಾ ಸಮಿತಿಯ ಮುಂದೆ ಮಂಡಿಸುತ್ತಾರೆ. ಜಿಲ್ಲಾ ಸಮಿತಿಯು ಫಲಾನುಭವಿಯನ್ನು ಆಯ್ಕೆಮಾಡುತ್ತದೆ.

## ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ಪರಿಷತ್

2011-12ನೇ ಸಾಲಿನಿಂದ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ **ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ಪರಿಷತ್‌ನ್ನು ದಿನಾಂಕ: 05.11.2011ರಂದು** ರಚಿಸಿ ಕ್ರೈಸ್ತ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಆಯವ್ಯಯದಲ್ಲಿ ರೂ.50.00 ಕೋಟಿಗಳ ಅನುದಾನವನ್ನು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ನೀಡಿ, ಅದರಲ್ಲಿ ಶೇಕಡಾ 40%ರಷ್ಟು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡುವ ಮುಖಾಂತರ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ
2) 'ಶ್ರಮಶಕ್ತಿ' ಯೋಜನೆ
3) ಮೈಕ್ರೋ ಸಾಲ ಮತ್ತು ಸಹಾಯಧನ ಯೋಜನೆ
4) ಮನೆ ನಿರ್ಮಾಣಕ್ಕೆ ಪಡೆದ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ:

## ಗೃಹ ನಿವೇಶನ ಖರೀದಿ ಮತ್ತು ಮನೆ ನಿರ್ಮಾಣಕ್ಕೆ ಪಡೆದ ಸಾಲದ ಮೇಲಿನ ಸಹಾಯಧನ ಯೋಜನೆ:

ರಾಜ್ಯದ ಮತಿಯ ಅಲ್ಪಸಂಖ್ಯಾತರು ಮನೆ ನಿರ್ಮಾಣಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಇತರೆ ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಗರಿಷ್ಠ ರೂ.5.00 ಲಕ್ಷದವರೆಗೆ ಪಡೆದ ಸಾಲದ ಮೇಲಿನ ಗರಿಷ್ಠ ರೂ.1.00 ಲಕ್ಷದ ಬಡ್ಡಿ ಸಹಾಯಧನ ನೀಡಲು ಉದ್ದೇಶಿಸಲಾಗಿದೆ.

## ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಎನ್.ಎಂ.ಡಿ.ಎಫ್.ಸಿ)

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ತನ್ನ 'ರಾಜ್ಯ ವಿತರಣ ಸಂಸ್ಥೆ' ಮೂಲಕ ಮತೀಯ ಅಲ್ಪಸಂಖ್ಯಾತರಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತಿದೆ. ರಾಜ್ಯದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅದರ 'ರಾಜ್ಯ ವಿತರಣಾ ಸಂಸ್ಥೆ'ಯಾಗಿದೆ. ಸದರಿ ನಿಗಮದ ಯೋಜನೆಗಳಡಿ ಮಾಡಿದ ಹೆಚ್ಚಳದ ವಿವರಗಳು ಕೆಳಕಂಡಂತಿವೆ:

- ಸಾರಿಗೆ ವಾಹನದ ಖರೀದಿಗೆ ಅವಧಿ ಸಾಲದ ಯೋಜನೆ
- ಸಣ್ಣ (ಮೈಕ್ರೋ) ಸಾಲ ಯೋಜನೆಯಡಿ ಸ್ವ-ಸಹಾಯ ಗುಂಪಿನ ಪ್ರತಿ ಸದಸ್ಯರಿಗೆ ರೂ.25,000/- ದಿಂದ ರೂ.50,000/-ಕ್ಕೆ ಸಾಲದ ಪ್ರಮಾಣದಲ್ಲಿ ಹೆಚ್ಚಳ
- ವಿದ್ಯಾಭ್ಯಾಸ ಸಾಲ ಯೋಜನೆಯಡಿ 01 ವರ್ಷ ಅವಧಿಯ ಉನ್ನತ ಕೌಶಲ್ಯ ಅಭಿವೃದ್ಧಿ ಯೋಜನೆಗಾಗಿ ಗರಿಷ್ಠ ರೂ.3.00 ಲಕ್ಷ ಅಲ್ಪಾವಧಿ ಸಾಲ
- ಗರಿಷ್ಠ 05 ವರ್ಷ ಅವಧಿಯ ವೃತ್ತಿಪರ ಕೋರ್ಸ್‌ಗಳಿಗೆ ಗರಿಷ್ಠ ರೂ.10.00 ಲಕ್ಷ ಸಾಲ
- ವಿದೇಶದಲ್ಲಿ ಗರಿಷ್ಠ 05 ವರ್ಷ ಅವಧಿಯ ಅಧ್ಯಯನಕ್ಕಾಗಿ ಗರಿಷ್ಠ ರೂ.20.00 ಲಕ್ಷ ಸಾಲ
- ಅಲ್ಪಸಂಖ್ಯಾತ ನಿರುದ್ಯೋಗಿ ಯುವಕ/ಯುವತಿಯರಿಗಾಗಿ ವೃತ್ತಿ ತರಬೇತಿ ಯೋಜನೆ, ಮಾರುಕಟ್ಟೆ ನೆರವು ಯೋಜನೆ
- ಎನ್.ಎಂ.ಡಿ.ಎಫ್.ಸಿ. ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರೂ.40,000/- ದಿಂದ ರೂ.81,000/- ಸಾವಿರಕ್ಕೆ ಹಾಗೂ ನಗರ ಪ್ರದೇಶದಲ್ಲಿ ರೂ.55,000/- ದಿಂದ ರೂ.1.03 ಲಕ್ಷಕ್ಕೆ ಆದಾಯ ಮಿತಿ ಪರಿಷ್ಕರಣೆ
- ವೃತ್ತಿ ತರಬೇತಿ ಯೋಜನೆಯಡಿ ಮಾಸಿಕ ತರಬೇತಿ ಶುಲ್ಕ ರೂ.1,000/- ದಿಂದ ರೂ.2,000/-ಕ್ಕೆ ಹೆಚ್ಚಳ. ವಿದ್ಯಾರ್ಥಿವೇತನ ರೂ.500/- ರಿಂದ ರೂ.1,000/-ಕ್ಕೆ ಹೆಚ್ಚಳ

## ಅವಧಿ ಸಾಲ ಯೋಜನೆ

ಈ ಯೋಜನೆಯಡಿ ರೂ.50,000/-ದಿಂದ ರೂ.10.00 ಲಕ್ಷಗಳ ಘಟಕ ವೆಚ್ಚದ ವ್ಯಾಪಾರಿ ಚಟುವಟಿಕೆಗಳಿಗೆ ಸಾಲವನ್ನು ಪರಿಗಣಿಸಲಾಗುತ್ತದೆ. ಒಟ್ಟು ಘಟಕ ವೆಚ್ಚದಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಶೇ.90ರಷ್ಟು ಪಾಲು ಮತ್ತು ಈ ನಿಗಮದ ಶೇ.5ರಷ್ಟು ಪಾಲಿನ ಸಾಲವನ್ನು ಈ ನಿಗಮವು ಮಂಜೂರು ಮಾಡುತ್ತದೆ. ಇನ್ನುಳಿದ ಶೇ.5ರಷ್ಟು ಹಣವನ್ನು ಫಲಾನುಭವಿಯು 'ವಂತಿಕೆ'ಯಾಗಿ ಭರಿಸಬೇಕಾಗುತ್ತದೆ. ನಿಗಮವು ಬಿಡುಗಡೆ ಮಾಡಿದ ಒಟ್ಟು ಸಾಲಕ್ಕೆ ವಾರ್ಷಿಕ ಶೇ.6ರ ಬಡ್ಡಿಯನ್ನು ವಿಧಿಸುತ್ತದೆ. ಈ ಯೋಜನೆಯಡಿಯಲ್ಲಿ ಸಾರಿಗೆ

ಕ್ಷೇತ್ರದಲ್ಲಿ ಫಲಾನುಭವಿ ಸ್ವಂತ ಸಾರಿಗೆ ವಾಹನ ಹೊಂದಲು ಹಣಕಾಸಿನ ನೆರವನ್ನು ನಿಗಮವು ಒದಗಿಸುತ್ತದೆ. ಸಾಲವನ್ನು ಶೇ.6ರ ಬಡ್ಡಿಯೊಂದಿಗೆ 36/60 ತಿಂಗಳಿನಲ್ಲಿ ಮರುಪಾವತಿಸಬೇಕಾಗುತ್ತದೆ.

## ಸಣ್ಣ (ಮೈಕ್ರೋ) ಸಾಲ ಯೋಜನೆ

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಪ್ರಾಯೋಜಿಸುವ ಈ ಯೋಜನೆಯನ್ನು ರಾಜ್ಯ ಸರ್ಕಾರವು ಪ್ರಾಯೋಜಿಸಿದ ಸಣ್ಣ (ಮೈಕ್ರೋ) ಸಾಲ ಯೋಜನೆ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಸೇವಾ ಮನೋಭಾವನೆ ಗುರಿ ಹೊಂದಿದ ಮತ್ತು ಮಿತವ್ಯಯ ಚಟುವಟಿಕೆ ನಡೆಸುತ್ತಿರುವ ನೋಂದಾಯಿತ ಸಂಘ/ಸಂಸ್ಥೆಯ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರ್ಪಡೆಗೊಳಿಸಿದ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಈ ಯೋಜನೆಯಡಿಯಲ್ಲಿ ಸಾಲವನ್ನು ನೀಡಲಾಗುವುದು. ಆದರೆ ಈ ಯೋಜನೆಯಡಿಯಲ್ಲಿ ಸಹಾಯಧನವನ್ನು ಒದಗಿಸುವುದಿಲ್ಲ. ಫಲಾನುಭವಿಯು ನಿಗಮದಿಂದ ಪಡೆದ ಸಾಲವನ್ನು ಶೇ.6ರ ಬಡ್ಡಿಯೊಂದಿಗೆ 36 ತಿಂಗಳಿನಲ್ಲಿ ಮರುಪಾವತಿಸಬೇಕಾಗುತ್ತದೆ.

## ವಿಧ್ಯಾಭ್ಯಾಸ ಸಾಲ ಯೋಜನೆ

ಕೆಳಕಂಡ ಕೋರ್ಸ್‌ಗಳಿಗೆ ಸಾಲಿಯಾನ ಶೇ.3 ಬಡ್ಡಿ ದರದಲ್ಲಿ ಸಾಲವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಸಾಲವನ್ನು 05 ವರ್ಷಗಳ ಅವಧಿಯಲ್ಲಿ ಮರುಪಾವತಿಸಬೇಕಾಗುತ್ತದೆ. ರಾಷ್ಟ್ರೀಯ ನಿಗಮದ ಶೇ.90ರಷ್ಟು ಪಾಲು ಮತ್ತು ಈ ನಿಗಮದ ಶೇ.5ರಷ್ಟು ಪಾಲಿನ ಸಾಲವನ್ನು ಈ ನಿಗಮವು ಮಂಜೂರು ಮಾಡುತ್ತದೆ. ಇನ್ನುಳಿದ ಶೇ.5ರಷ್ಟು ಹಣವನ್ನು ಫಲಾನುಭವಿಯು 'ವಂತಿಕೆ'ಯಾಗಿ ಭರಿಸಬೇಕಾಗುತ್ತದೆ.

- 01 ವರ್ಷ ಅವಧಿಯ ಉನ್ನತ ಕೌಶಲ್ಯ ಅಭಿವೃದ್ಧಿ ಯೋಜನೆಗಾಗಿ ಗರಿಷ್ಠ ರೂ.3.00 ಲಕ್ಷ ಅಲ್ಪಾವಧಿ ಸಾಲ
- ಭಾರತದಲ್ಲಿ, ಗರಿಷ್ಠ 05 ವರ್ಷ ಅವಧಿಯ ವೃತ್ತಿಪರ ಸ್ನಾತಕ ಕೋರ್ಸ್‌ಗಳಿಗೆ ವಾರ್ಷಿಕ ರೂ.2.00 ಲಕ್ಷ ದರದಲ್ಲಿ ಗರಿಷ್ಠ ರೂ.10.00 ಲಕ್ಷ ಸಾಲ
- ಗರಿಷ್ಠ 03 ವರ್ಷ ಅವಧಿಯ ವೃತ್ತಿಪರ ಸ್ನಾತಕೋತ್ತರ ಕೋರ್ಸ್‌ಗಳಿಗೆ ವಾರ್ಷಿಕ ರೂ.2.00 ಲಕ್ಷ ದರದಲ್ಲಿ ಗರಿಷ್ಠ ರೂ.6.00 ಲಕ್ಷ ಸಾಲ

- ವಿದೇಶದಲ್ಲಿ ಗರಿಷ್ಠ 05 ವರ್ಷ ಅವಧಿಯ ಅಧ್ಯಯನಕ್ಕಾಗಿ ವಾರ್ಷಿಕ ರೂ.4.00 ಲಕ್ಷ ದರದಲ್ಲಿ ಗರಿಷ್ಠ ರೂ.20.00 ಲಕ್ಷ ಸಾಲ

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

### 2014-15 ರ ಆರ್ಥಿಕ ಹಾಗು ಭೌತಿಕ ಗುರಿ ಹಾಗೂ ಸಾಧನೆ 30-11-2014ರವರೆಗೆ.

| ಕ್ರ. ಸಂ | ಯೋಜನೆಯ ಹೆಸರು | ಆಯವ್ಯಯ ದಲ್ಲಿ ನಿಗದಿಪಡಿಸಿದ ಮೊತ್ತ | ಸರ್ಕಾರದಿಂದ ಬಿಡುಗಡೆ ಯಾದ ಮೊತ್ತ | ಗುರಿ | | ಸಾಧನೆ | |
|---|---|---|---|---|---|---|---|
| | | | | ಆರ್ಥಿಕ | ಭೌತಿಕ | ಭೌತಿಕ | ಆರ್ಥಿಕ |
| 1 | ಷೇರು ಬಂಡವಾಳ | | | | | | |
| a | ಸ್ವಾವಲಂಬನ ಮಾರ್ಜಿನ್ ಹಣ ಸಾಲದ ಯೋಜನೆ | 5600.00 | 450.00 | 600.00 | 4400 | 3530 | 574.40 |
| b | ಅರಿವು ಸಾಲ ಯೋಜನೆ | | 3750.00 | 5000.00 | 16667 | 14464 | 4000.85 |
| 2 | ಸಹಾಯಧನ ಯೋಜನೆ | 300.00 | 225.00 | 300.00 | 4400 | 3530 | 197.24 |
| 3 | ಗಂಗಾ ಕಲ್ಯಾಣ ಯೋಜನೆ | 2700.00 | 2025.00 | 2700.00 | 1800 | 2416 | 3303.06 |
| 4 | ಶ್ರಮಶಕ್ತಿ ಸಾಲ ಯೋಜನೆ | 2221.00 | 1665.75 | 2221.00 | 11105 | 9989 | 1902.45 |
| 5 | ಮೈಕ್ರೋ ಸಾಲ ಯೋಜನೆ | 1200.00 | 900.00 | 1200.00 | 24000 | 13670 | 683.50 |
| 6 | ಮೈಕ್ರೋ ಸಹಾಯಧನ ಯೋಜನೆ | 1200.00 | 900.00 | 1200.00 | | 13670 | 683.50 |
| 7 | ಕ್ರಿಶ್ಚಿಯನ್ ಅಭಿವೃದ್ಧಿ ಯೋಜನೆ | 4000.00 | 3000.00 | 4000.00 | 19667 | 3649 | 731.01 |
| | ಒಟ್ಟು | 17221.00 | 12915.75 | 17221.00 | 82039 | 64918 | 12076.01 |
| 8 | ವಸತಿ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ | | 2500.00 | 2500.00 | 2500 | 108 | 53.00 |
| | ಒಟ್ಟು | 17221.00 | | 19721.00 | 84539 | 65026 | 12129.01 |

** ವಸತಿ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆಯ ಮೊತ್ತವು 2013–14ನೇ ಸಾಲಿನ ಅಂತ್ಯದಲ್ಲಿ ಬಿಡುಗಡೆ ಯಾಗಿರುವ ಹಿನ್ನಲೆಯಲ್ಲಿ ಈ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನ ಮಾಡಲು ಕ್ರಮ ವಹಿಸಲಾಗಿದೆ.

**ಯಾವುದೇ ಹೆಚ್ಚುವರಿ ಮಾಹಿತಿಗಾಗಿ, ಆಯಾ ಜಿಲ್ಲಾ ಕಛೇರಿಯನ್ನು ಸಂಪರ್ಕಿಸಿ ವಿಳಾಸ ಮತ್ತು ದೂರವಾಣಿ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.**

| | |
|---|---|
| The District Manager, Karnataka Minorities Development Corporation, 2nd Floor, Room No 2, Hameed Sha Complex , Near Halsoor Gate Police Station, Bangalore (U) 080-22114815 | The District Manager, Karnataka Minorities Development Corporation, #10-3/96, N.V Complex, Behind Nisty Show Room, Vithal Nagar, GULBARGA 08472-232425 |
| The District Manager, Karnataka Minorities Development Corporation, No.92, 4th Main Road, Hebbal Mill, Near MLA Krishnppa home, Ganganagar, BANGALORE NORTH DISTRICT, 080-23539786 | The District Manager, Karnataka Minorities Development Corporation,<br>IDSMT Stall, Muncipal Complex, 2nd Block, # 5, Chittapur Road, YADGIRI 08473253785 |
| The District Manager,Karnataka Minorities Development Corporation, 1599, Y N Building, Yalahanka Street, Behind New Bus Stand, Devanahalli "Tq" BANGALORE RURAL DISTRICT, 080-27681786 | The District Manager, Karnataka Minorities Development Corporation, Near Ganappathi Tempal Circle, Hoysalanagar, Main road Police Colony,Kuvempo Nagar, HASSAN 08172-233333 |
| The District Manager, Karnataka Minorities Development Corporation, No 1674, Mahadevayya Building, 1st floor, old uninon bank road, Ijur colony, RAMANAGARAM 080-27271029 | The District Manager, Karnataka Minorities Development Corporation, Ground Floor, Abhivrudhi Bhavan, Zillapanchyath Building, Near Sudarshan Circle, KODAGU 08272-220449 |

| | |
|---|---|
| The District Manager, Karnataka Minorities Development Corporation, No:B13, 2nd Floor, District Administration Bhavana, Shidlagatta Road, CHIKBALLAPURA 08156-277047 | The District Manager, Karnataka Minorities Development Corporation, #167, 2nd Floor, Ramavilas Road, Opp Vijay Karnataka News Paper Office, K.R Mohalla , MYSORE 0821-2430080 |
| The District Manager, Karnataka Minorities Development Corporation, Behind Anjaneya Temple, Ammavarepeet, KOLAR 08152-240025 | The District Manager, Karnataka Minorities Development Corporation, In Front Of District Training Intitute, Near Zillapanchyath, MANDYA 08232-220186 |
| The District Manager, Karnataka Minorities Development Corporation, Near Burujanahatti Circle, Holalkere Main Road, CHITRADURGA 08194-226412 | The District Manager, Karnataka Minorities Development Corporation, D.Devaraj Arasu Bhavan, Radio Park, Urva Stores, Mangalore-575006, DAKSHINA KANNADA 08242-450044 |
| The District Manager, Karnataka Minorities Development Corporation, Main Road , Bar line, Opp Chamundeshwari Temple, TUMKUR 0816-2251023 | The District Manager, Karnataka Minorities Development Corporation, District Administation Bhavan , 3rd Floor, Room No. 305, Rangasamudra Road,CHAMRAJNAGAR 08226-222332 |
| The District Manager, Karnataka Minorities Development Corporation, Jayadevappa Complex, Apollo Clinic Upstairs, Near Jail Circle, Durgigudi, SHIMOGA 08182-228262 | The District Manager, Karnataka Minorities Development Corporation, "Rajathadri" District Commissioner Office, A Block, 1st Floor Manipal, **Brahmagiri,** UDUPI 0820-2574990 |
| The District Manager, Karnataka Minorities Development Corporation, Kurubara Hostel, Jaydeva Circle, Opp Karnataka Bank Hadadi Road, DAVANGERE 08192-232349 | The District Manager, Karnataka Minorities Development Corporation, Kavali Building, APMC road, 3rd cross Naharu Nagar, BELGAUM 08312-472296 |

| | |
|---|---|
| The District Manager, Karnataka Minorities Development Corporation, 12-11-49, 1stFloor, Ameer Trading Complex, Arab mohalla, Near PWD Office, RAICHUR 08532-250825 | The District Manager, Karnataka Minorities Development Corporation, Shivanagi Building , Behind , S.P Office, New Kumbar Galli, BIJAPUR 08352-222344 |
| The District Manager, Karnataka Minorities Development Corporation, Hospet Road, D.C Office, KOPPAL 08539-225008 | The District Manager, Karnataka Minorities Development Corporation, Mini Vidhana Soudha, D.C Complex Ground Floor, DHARWAD 0836-2748226 |
| The District Manager, Karnataka Minorities Development Corporation, #45, Infantry Road M.R.F Tyre Show Room, Next to Sanjay Gandhi Nagar, BELLARY 08392-270370 | The District Manager, Karnataka Minorities Development Corporation, Wasim Manzil, 2nd Floor, Khadimulla Road, Near High Church, KARAWARA 08382-223229 |
| The District Manager, Karnataka Minorities Development Corporation, Pratapnagar SBH Bank 1st Floor, Naubad, BIDAR 08482-232178 | The District Manager, Karnataka Minorities Development Corporation, Zilla Adalitha Bhavan 'B' Block, Room No 26, Devgiri, HAVERI 08375-249114 |
| The District Manager, Karnataka Minorities Development Corporation, Room No 233, Zilla Administative Bhavan, Navnagar, BAGALAKOTE 08362-236216 | The District Manager, Karnataka Minorities Development Corporation, District Administative Bhavan , 2nd floor, Room No 211, GADAG 08372-232327 |

| |
|---|
| The District Manager, Karnataka Minorities Development Corporation, Reshma Department Building, Zillapanchayath Office North Center , CHIKMAGALUR 08262-220443 |